**ದಿ: 04-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ಶ್ರೀ ಕೆ ಎಸ್ ಆರ್ ಕೆ ವಕೀಲರಿಂದ :**

ಈ ದಾವೆಯಲ್ಲಿ ನಾನು ಪ್ರತಿವಾದಿಯಾಗಿದ್ದು ಇಂದು ನನ್ನ ಮೌಖಿಕ ಸಾಕ್ಷದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಹಾಕಿರುತ್ತೇನೆ.

ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

1. ಕೆ ಎಫ್ ಎಸ್ ಸಿ ಸಂಸ್ಥೆಗೆ ಸಲ್ಲಿಸಿದ ಸಾಲದ ಅರ್ಜಿಯನ್ನು ನಿ ಡಿ -3 ಎಂದು ಗುರುತಿಸಲಾಯಿತು.

2. ದಿನಾಂಕ: 01-02-2001 ಸಹಾಯಕ ಆಯುಕ್ತರು ರಾಯಚೂರು ರವರು ನೀಡಿರುವ ಭೂ ಪರಿವರ್ತನಾ ಆದೇಶದ ದೃಢೀಕೃತ ನಕಲನ್ನು ನಿ ಡಿ 4 ಎಂದು ಗುರುತಿಸಲಾಯಿತು.

3. ದಿನಾಂಕ: 19-03-2012 ರಂದು ಜಂಟಿ ನಿರ್ದೇಶಕರು ಕೈಗಾರಿಕೆ ಅಭಿವೃದ್ದಿ ರವರಿಗೆ ಸಲ್ಲಿಸಿರುವ ಪತ್ರವನ್ನು ನಿ ಡಿ 5 ಎಂದು ಗುರುತಿಸಲಾಯಿತು.

4. ಇ-ಸ್ವತ್ತು ಖಾತಾ ನಮೂನೆ -9 ಮತ್ತು 11(ಎ) ಇವುಗಳನ್ನು ನಿ ಡಿ 6 ಮತ್ತು 7 ಎಂದು ಗುರುತಿಸಲಾಯಿತು.

5. ಜಿ ಎಸ್ ಟಿ ರಜಿಸ್ಟ್ರೇಶನ್ ಸರ್ಟಿಫಿಕೇಟ್ ನ್ನು ನಿ ಡಿ 8 ಎಂದು ಗುರುತಿಸಲಾಯಿತು.

6. ಬಂಡೇಗುಡ್ಡ ಗ್ರಾಮದ ಜಮೀನಿನ ಸರ್ವೆ ನಂಬರ್ 14/*/1 ರಿಂದ 4 ಇವುಗಳ 01 ಕಂಪ್ಯೂಟರ್ ಮುಟೇಶನ್ ಮತ್ತು 03 ಕಂಪ್ಯೂಟರ್ ಪಹಣಿಗಳನ್ನು ಕ್ರಮವಾಗಿ ನಿ ಡಿ 9 ರಿಂದ 12 ಎಂದು ಗುರುತಿಸಲಾಯಿತು.

7. ಕೆ ಎಫ್ ಎಸ್ ಸಿ ಸಂಸ್ಥೆಯವರು ನೀಡಿರುವ ಬ್ಯಾಲೆನ್ಸ್ ಶೀಟ್ ನ್ನು ನಿ ಡಿ -13 ಎಂದು ಗುರುತಿಸಲಾಯಿತು.

**ಪಾಟೀಸವಾಲು: ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ